**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ನಾಗಮಂಗಲ.**

**ಅಸಲು ದಾವಾ ಸಂಖ್ಯೆ. 290/2017**

**ವಾ.ಸಾ-1**

**ಸಾಕ್ಷಿಗೆ ದಿನಾಂಕಃ 17-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ. ಕೆ.ಜಿ.ಎಲ್.ಎಸ್ ಪ್ರತಿವಾದಿಯ ಪರ ವಕೀಲರಿಂದಃ**

1. ನಾನು ಮೂಲತಹ ಮಹರಾಷ್ಟ್ರ ರಾಜ್ಯದವನು. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಕನ್ನಡವನ್ನು ಮಾತನಾಡಲು ಬರುತ್ತದೆ. ನಾನು ವ್ಯವಹಾರವನ್ನು ಇಂಗ್ಲೀಷ್ ನಲ್ಲಿ ಮಾಡುತ್ತೇನೆ. ಸಾಕ್ಷಿಯು ಮುಂದುವರೆದು ಮಾತನಾಡುವುದು ಕನ್ನಡದಲ್ಲಿಯೇ ಮಾತನಾಡುತ್ತೇನೆ. ಆದರೆ ಪತ್ರ ವ್ಯವಹಾರವನ್ನು ಇಂಗ್ಲೀಷ್ ನಲ್ಲಿ ಮಾಡುತ್ತೇನೆ ಎಂದು ನುಡಿಯುವರು.

2. ನಾಗಮಂಗಲದಲ್ಲಿ ನಾನು ಚಿನ್ನಬೆಳ್ಳಿ ಗಿರವಿ ಇಟ್ಟು ಕೊಂಡಿದ್ದೇನೆ. ಸದರಿ ಅಂಗಡಿಯನ್ನು ನಮ್ಮ ಮನೆಯ ದಾವಾ ಸ್ವತ್ತಿನಲ್ಲಿ ಇಟ್ಟುಕೊಂಡಿದ್ದೇನೆ. ಗಿರವಿ ಅಂಗಡಿಯ ಪರವಾನಗಿಯಲ್ಲಿ ದಾವಾ ಸ್ವತ್ತನ್ನೇ ತೋರಿಸಿದ್ದೇನೆ. ಸದರಿ ಪರವಾನಗಿಯಲ್ಲಿ ಮನೆಯ ಚಕ್ಕುಬಂದಿಯೂ ಕೂಡ ನಮೂದಾಗಿದೆ. ಸದರಿ ಪರವಾನಗಿಯನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

3. ನನಗೆ ಸೇರಿದ ಗಲ್ಲಿಯನ್ನು ಪ್ರತಿವಾದಿಯು ಒತ್ತುವರಿ ಮಾಡಿ ಸರ್ಜ ನಿರ್ಮಿಸಿಕೊಂಡಿದ್ದಾರೆ ಎಂದು ಈ ದಾವೆಯನ್ನು ಹೂಡಿದ್ದೇನೆ. ಪ್ರತಿವಾದಿಯು ನನಗೆ ತೊಂದರೆ ಮಾಡಿರುವ ಕುರಿತು ಪೋಲೀಸ್ ದೂರು ನೀಡಿದ್ದೇನೆ. ಈ ಕುರಿತು ದೂರನ್ನು ನನ್ನ ಮಗಳು ಬರೆದಿದ್ದರು.

4. ದಾವಾ ಮನೆಯನ್ನು ಕಾರ್ತಿಕ್ ಮತ್ತು ಪುಟ್ಟರಾಜು ಎಂಬುವವರಿಂದ ಖರೀದಿಸಿದ್ದೇನೆ. ಸದರಿ ಕಾರ್ತಿಕ್ ಮತ್ತು ಪುಟ್ಟರಾಜುರವರು ದಾವಾ ಮನೆಯನ್ನು ಯಾರಿಂದ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಈ ಕುರಿತು

**ಅಸಲು ದಾವಾ ಸಂಖ್ಯೆ. 290/2017**
**ವಾ.ಸಾ-1**

ದಾಖಲಾತಿಗಳನ್ನು ನಾನು ನೋಡಿದ್ದೇನೆ ಮತ್ತು ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

5. ದಿನಾಂಕ 05-04-2014 ರಂದು ದಾವಾ ಆಸ್ತಿಯನ್ನು ಕಾರ್ತಿಕ್ ಮತ್ತು ಪುಟ್ಟರಾಜುರವರಿಂದ ಖರೀದಿಸಿದ್ದೇನೆ. ನಾನು ದಾವಾ ಮನೆಯನ್ನು ಖರೀದಿಸುವ ಮೊದಲು ಕಾರಾರು ಪತ್ರವನ್ನು ಮಾಡಿಸಿರಲಿಲ್ಲ ನೇರವಾಗಿ ಖರೀದಿ ಪತ್ರವನ್ನೇ ಮಾಡಿಸಿದ್ದೇನೆ.

6. ನಾನು ದಾವಾ ಮನೆಯನ್ನು ಖರೀದಿಸುವ ಮೊದಲು ಪ್ರತಿವಾದಿಯ ಮನೆ ಇತ್ತು ಎಂದರೆ ಸರಿ. ನಾನು ದಾವಾ ಮನೆಯನ್ನು ಖರೀದಿಸುವ ಮೊದಲು ನಾನು ಮನೆಯನ್ನು ಹೋಗಿ ನೋಡಿದ್ದೆನು. ದಾವಾ ಮನೆಯನ್ನು ಪುಟ್ಟರಾಜುರವರು ಖರೀದಿಸುವ ಕಾಲಕ್ಕೆ ನಾನು ದಾವಾ ಮನೆಯನ್ನು ನೋಡಿರಲಿಲ್ಲ. ನಾನು ದಾವಾ ಮನೆಯನ್ನು ಖರೀದಿಸುವ ಕಾಲಕ್ಕೆ ದಾವಾ ಮನೆಯು ಸುಮಾರು 10-12 ವರ್ಷಗಳಷ್ಟು ಹಳೆಯ ಮನೆಯಾಗಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುವರು.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟಿ-ಸವಾಲಿಗೆ ಸಮಯವಕಾಶ ಕೋರಿದ್ದು, ಅನುಮತಿಸಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಶ್ರೀ. ಹೆಚ್.ಜೆ.ಯು ವಕೀಲರ ಮೂಲಕ**

**ಓ ಹೇ ಕೇ ಸರಿ ಇದೆ.** **ನನ್ನ ಸಮಕ್ಷಮ**

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.**